ಮೆಸ್ಕಾಂ
MESCOM

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್ : 0824: 2885700, 702
ಫ್ಯಾಕ್ಸ್ : 0824: 2211396
ಇಮೈಲ್ : mdmescom@rediffmail.com
ವೆಬ್‌ಸೈಟ್ : www.mesco.in
CIN : U40109KA2002SGCO30425

ನೋಂದಾಯಿತ ಆಡಳಿತ ಕಛೇರಿ
"ಮೆಸ್ಕಾಂ ಭವನ"
ಅಂಚೆ ಪೆಟ್ಟಿಗೆ ಸಂಖ್ಯೆ-1130
ಕಾವೂರು ಅಡ್ಡ ರಸ್ತೆ, ಬಿಜೈ
ಮಂಗಳೂರು-575 004

ಕ್ರ. ಸಂ. : ಮೆಸ್ಕಾಂ/ವ್ಯನಿ/ಹಿಆಕಾ/ತ್ರೈವ(೪೬ ಮೊ.ಸಂ.ಅ)/ಪ ವೈಬಿಸಿ-೬೯/೨೦೧೯-೨೦ ದಿನಾಂಕ : ೧೧/೦೯/೨೦೧೯

## <u>ಸುತ್ತೋಲೆ</u>

**ವಿಷಯ:** **ವಿದ್ಯುತ್ ಅಪಘಾತಗಳು ಸಂಭವಿಸಿದಾಗ ಕಂಪೆನಿಯ ಸಿಬ್ಬಂದಿಗಳು ಹಾಗೂ ಜಾಗೃತದಳ ಪೋಲೀಸ್ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ.**

**ಉಲ್ಲೇಖ:** ಹಿರಿಯ ಉಪಾಧ್ಯಕ್ಷರು, ಕವಿಮಂ., ಇಂಜಿನಿಯರ್‌ಗಳ ಸಂಘ, ಮಂಗಳೂರು ವಲಯ ಕೇಂದ್ರರವರ ಪತ್ರ ಸಂಖ್ಯೆ : 16. ದಿನಾಂಕ 30.07.2019.

*******

ಮೆಸ್ಕಾಂ., ವ್ಯಾಪ್ತಿಯ ವಿಭಾಗ/ಉಪವಿಭಾಗ/ಶಾಖಾ ಕಛೇರಿಗಳ ವ್ಯಾಪ್ತಿಯಲ್ಲಿ ಸುರಕ್ಷತಾ ನಿಯಮಗಳನ್ನು ಅನುಸರಿಸಿದರೂ ಸಹ ವಿವಿಧ ಕಾರಣಗಳಿಂದಾಗಿ ಕೆಲವೊಮ್ಮೆ ವಿದ್ಯುತ್ ಅಪಘಾತಗಳು ಸಂಭವಿಸುತ್ತಿರುತ್ತದೆ. ಕಂಪೆನಿಯ ಸಿಬ್ಬಂದಿಗಳು ಎಷ್ಟೇ ಎಚ್ಚರಿಕೆಯನ್ನು ವಹಿಸಿದ್ದರೂ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ/ಮಳೆಗಾಳಿಯ ರಭಸಕ್ಕೆ ಗಿಡ ಮರಗಳು ವಿದ್ಯುತ್ ತಂತಿಯ ಮೇಲೆ ಬಿದ್ದಾಗ, ಸಾರ್ವಜನಿಕರು ಅಪಘಾತಕ್ಕೀಡಾಗಿರುವ ಸನ್ನಿವೇಶಗಳು ಉಂಟಾಗಿರುತ್ತವೆ, ಕೆಲವೊಮ್ಮೆ ವ್ಯಕ್ತಿ/ಸಂಸ್ಥೆಗಳು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವವರು ಅಸುರಕ್ಷತೆಯಿಂದ ಕೂಡಿರುವ ಸ್ಥಾವರಗಳಲ್ಲಿ, ತಂತಿ ಬೇಲಿಗಳ ವಿದ್ಯುದ್ದೀಕರಣ ಮಾಡಿದ ಸಂದರ್ಭದಲ್ಲಿ ಉಂಟಾಗುವ ಅಪಘಾತಗಳಲ್ಲಿ, ಅನಧಿಕೃತವಾಗಿ ಎಳೆದಿರುವ ವ್ಯಕ್ತಿಯ ಬದಲು ಅದರ ಹೊಣೆ ಮೆಸ್ಕಾಂ., ಸಿಬ್ಬಂದಿ ಮೇಲೆ ಹೇರಿರುತ್ತಾರೆ.

ಇಂತಹ ಪ್ರಕರಣಗಳಲ್ಲಿ ಅಪಘಾತಕ್ಕೀಡಾದ ವ್ಯಕ್ತಿಯ ಅವಲಂಬಿತರು ಸ್ವಾಭಾವಿಕವಾಗಿ ಸತ್ಯಾಂಶವನ್ನು ತಿಳಿದುಕೊಳ್ಳದೆ ತಕ್ಷಣ ಸಂಬಂಧಪಟ್ಟ ಕಂಪೆನಿಯ ನಿರ್ವಹಣಾ ಸಿಬ್ಬಂದಿ ಹಾಗೂ ಶಾಖಾಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುವ ಉದಾಹರಣೆಗಳು ಇರುತ್ತವೆ. ಕಂಪೆನಿಯ ಅಧಿಕಾರಿ/ಸಿಬ್ಬಂದಿಗಳು ಬಹಳಷ್ಟು ಜಾಗ್ರತೆಯಿಂದ ವಿದ್ಯುತ್ ಜಾಲವನ್ನು ನಿರ್ವಹಣೆಯನ್ನು ಮಾಡಿದರೂ ಸಹ ಅವರುಗಳು ಕೈಮೀರಿ ಉಂಟಾಗುವ ವಿದ್ಯುತ್ ಅಪಘಾತಗಳಿಗೆ ಅಧಿಕಾರಿ/ಸಿಬ್ಬಂದಿಗಳು ಹೊಣೆಗಾರರೆಂದು ಅವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದಲ್ಲಿ ಮಾನಸಿಕ ಸ್ಥೈರ್ಯವನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ ಹಾಗೂ ಇಂತಹ ವಿದ್ಯುತ್ ಅಪಘಾತಗಳನ್ನು ಉದಾರಣೆಯಾಗಿಸಿ ಮಾಧ್ಯಮಗಳಲ್ಲಿ ಕಂಪನಿ ಅಧಿಕಾರಿಗಳ/ಸಿಬ್ಬಂದಿಯವರ ನಿರ್ಲಕ್ಷ್ಯತನದಿಂದ ಉಂಟಾಗಿರುತ್ತದೆಂದು ಬಿಂಬಿಸಲಾಗಿರುತ್ತದೆ.

ಇಂತಹ ಪ್ರಕರಣಗಳು ಮರುಕಳಿಸದಂತೆ ಮಾಡಲು ಹಾಗೂ ಕಂಪೆನಿಯ ಅಧಿಕಾರಿಗಳು/ಸಿಬ್ಬಂದಿ ವರ್ಗದವರು ನಿರ್ಭೀತಿಯಿಂದ ತಮ್ಮ ಕೆಲಸ ನಿರ್ವಹಿಸಲು ಅನುವು ಮಾಡಿ ಕೊಡಬೇಕಾಗಿರುತ್ತದೆ.

ಆದುದರಿಂದ ವಿದ್ಯುತ್ ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಿ ಕಂಪೆನಿಯ ಸಿಬ್ಬಂದಿಗಳು ಹಾಗೂ ಜಾಗೃತದಳ ಪೋಲೀಸ್ ಅಧಿಕಾರಿಗಳು ಈ ಕೆಳಗಿನಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ulate
ong
taff
E 11/9

1. ಎಲ್ಲಾ ರೀತಿಯ ವಿದ್ಯುತ್/ಯಾಂತ್ರಿಕ, ಮಾರಣಾಂತಿಕ/ಮಾರಣಾಂತಿಕವಲ್ಲದ ಇಲಾಖಾ/ಇಲಾಖೇತರ ವ್ಯಕ್ತಿಗಳಿಗೆ/ಜಾನುವಾರುಗಳಿಗೆ ಅಪಘಾತ ಸಂಭವಿಸಿದಲ್ಲಿ ವರದಿಯನ್ನು ಒಂದು ಗಂಟೆಯೊಳಗೆ ಸಂಬಂಧಿತ ಕಾ ಮತ್ತು ಪಾ ಘಟಕದ ಅಧಿಕಾರಿಗಳು/ಸಿಬ್ಬಂದಿಗಳು ತಮ್ಮ ವ್ಯಾಪ್ತಿಗೆ ಬರುವ ಮೆಸ್ಕಾಂ., ಜಾಗೃತದಳ ಪೋಲೀಸ್ ಅಧಿಕಾರಿಗಳಿಗೆ ತಿಳಿಸುವುದು.

2. ಕಾರ್ಯ ವ್ಯಾಪ್ತಿಯ ಸಹಾಯಕ ಕಾರ್ಯನಿವಾಹಕ ಇಂಜಿನಿಯರ್(ವಿ) ಜೊತೆಗೆ ಸಂಬಂಧ ಪಟ್ಟ ಜಾಗೃತದಳ ಪೋಲೀಸ್ ಅಧಿಕಾರಿ ತಕ್ಷಣವೇ ಸ್ಥಳಕ್ಕೆ ಧಾವಿಸಿ ಅಪಘಾತದ ಬಗ್ಗೆ ನಿಖರ ಮಾಹಿತಿಯನ್ನು ಸಂಗ್ರಹಿಸಿ ಪರಿಸ್ಥಿತಿಯನ್ನು ನಿಭಾಯಿಸಬೇಕು. ಕಾನೂನು ಮತ್ತು ಸುವ್ಯವಸ್ಥೆಯ ಉಲ್ಲಂಘನೆ ಆದಲ್ಲಿ ಜಾಗೃತದಳ ಪೋಲೀಸ್ ಅಧಿಕಾರಿಗಳು ಸ್ಥಳೀಯ ಪೋಲೀಸ್ ಅಧಿಕಾರಿಗಳ ಸಹಾಯವನ್ನು ಪಡೆದುಕೊಳ್ಳುವುದು.

3. ಸಂಬಂಧಪಟ್ಟ ಜಾಗೃತದಳ ಪೋಲೀಸ್ ಅಧಿಕಾರಿಗಳು ಸಂಪರ್ಕ ಅಧಿಕಾರಿಗಳಾಗಿ ಸ್ಥಳೀಯ ಪೋಲೀಸ್ ಅಧಿಕಾರಿಗಳು ಮತ್ತು ಮೆಸ್ಕಾಂ., ಅಧಿಕಾರಿಗಳೊಂದಿಗೆ ಕೆಲಸ ನಿರ್ವಹಿಸುವುದು, ಪೋಲೀಸ್ ದೂರುಗಳನ್ನು ಮತ್ತು ಇತರ ಕಾರ್ಯ ವಿಧಾನಗಳನ್ನು ಸಲ್ಲಿಸುವಲ್ಲಿ ಕಾ & ಪಾ ಸಿಬ್ಬಂದಿಗಳಿಗೆ ಸಹಾಯ ಮಾಡುವುದು.

4. ಸಂಬಂಧಪಟ್ಟ ಜಾಗೃತದಳ ಪೋಲೀಸ್ ಅಧಿಕಾರಿಗಳು ಈ ಘಟನೆಯ ವಾಸ್ತವಿಕ ವರದಿಯನ್ನು ಮೆಸ್ಕಾಂ ಜಾಗೃತದಳದ ಮುಖ್ಯಸ್ಥರಾದ ಅಧೀಕ್ಷಕ ಇಂಜಿನಿಯರ್(ವಿ)(ವಾಣಿಜ್ಯ) ರವರಿಗೆ ಸಲ್ಲಿಸಿ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರು(ತಾಂತ್ರಿಕ) ಅವರಿಗೆ ಸಲ್ಲಿಸತಕ್ಕದು.

5. ಸಂಬಂಧಪಟ್ಟ ಜಾಗೃತದಳ ಪೋಲೀಸ್ ಅಧಿಕಾರಿಗಳು ಛಾಯಾಚಿತ್ರ ಮತ್ತು ವೀಡಿಯೋ ಚಿತ್ರೀಕರಣದೊಂದಿಗೆ ಘಟನೆಯ ವಾಸ್ತವತೆಯನ್ನು ಸ್ಪಷ್ಟವಾಗಿ ಸಾಕ್ಷೀಕರಿಸುವುದು.

6. ಸಂಬಂಧಪಟ್ಟ ಜಾಗೃತದಳ ಪೋಲೀಸ್ ಅಧಿಕಾರಿಗಳು ಅಪಘಾತ ಸ್ಥಳದಲ್ಲಿ ಹಾಜರಾಗಬೇಕು ಮತ್ತು ಸ್ಥಳೀಯ ಮೆಸ್ಕಾಂ ಅಧಿಕಾರಿಗಳಿಗೆ/ಸಿಬ್ಬಂದಿಗೆ ನೈತಿಕ ಬೆಂಬಲ ಮತ್ತು ರಕ್ಷಣೆ ಮತ್ತು ಸಹಾಯವನ್ನು ಒದಗಿಸಬೇಕು ಮತ್ತು ಕಾನೂನು ನೆರವು ನೀಡಬೇಕು.

7. ಕರ್ನಾಟಕ ಪೋಲೀಸ್ ಮ್ಯಾನ್ಯುಲ್ ಪ್ರಕಾರ, ಜಾಗೃತದಳ ಪೋಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಸಂಭವಿಸಿದ ಅಪಘಾತದ ಅಂತಿಮ ವರದಿಯನ್ನು ಸಲ್ಲಿಸುವ ತನಕ ಪೂರ್ಣವಾಗಿ ಸಕ್ರಿಯಗೊಂಡು ಅದರ ಕಡತವನ್ನು ನಿರ್ವಹಿಸತಕ್ಕದು.

Snehal

**ವ್ಯವಸ್ಥಾಪಕ ನಿರ್ದೇಶಕರು**
**ಮಂ.ವಿ.ಸ.ಕಂ, ಮಂಗಳೂರು.**

**ಪ್ರತಿಗಳು:**

1. ಮುಖ್ಯ ಇಂಜಿನಿಯರ್ (ವಿ),ಮೆಸ್ಕಾಂ., ಮಂಗಳೂರು/ಶಿವಮೊಗ್ಗ ವಲಯ.
2. ನಿಯಂತ್ರಣಾಧಿಕಾರಿ(ಕಂ&ಕಾ), ಕಾರ್ಪೋರೇಟ್ ಕಛೇರಿ, ಮೆಸ್ಕಾಂ., ಮಂಗಳೂರು.
3. ಅಧೀಕ್ಷಕ ಇಂಜಿನಿಯರ್(ವಿ)(ತಾಂ)/(ವಾಣಿಜ್ಯ)/(ಖರೀದಿ)/(ಯೋಜನೆಗಳು), ಕಾರ್ಪೋರೇಟ್ ಕಛೇರಿ, ಮೆಸ್ಕಾಂ., ಮಂಗಳೂರು
4. ಅಧೀಕ್ಷಕ ಇಂಜಿನಿಯರ್ (ವಿ), ಆರ್.ಟಿ ವೃತ್ತ/ಮಾಸಂಅ ಕೇಂದ್ರ/ಡಿಸಿಸಿ & ಸ್ಕಾಡಾ.,ಮೆಸ್ಕಾಂ., ಮಂಗಳೂರು
5. ಅಧೀಕ್ಷಕ ಇಂಜಿನಿಯರ್ (ವಿ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವೃತ್ತಗಳು,
6. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು
7. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು.
8. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐಟಿ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು-ಮೆಸ್ಕಾಂ., **ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು-ತಮ್ಮ ಅಧೀನ ಎಲ್ಲಾ ಶಾಖಾಧಿಕಾರಿಗಳ ಗಮನಕ್ಕೆ ತರುವುದು.
10. ಲೆಕ್ಕಾಧಿಕಾರಿ(ಆಂ.ಪ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು.
11. ಹಿರಿಯ ಆಪ್ತ ಕಾರ್ಯದರ್ಶಿ- ವ್ಯ.ನಿ./ನಿ(ತಾಂ), ಮೆಸ್ಕಾಂ.,
12. ಆಪ್ತ ಕಾರ್ಯದರ್ಶಿ, ಮು.ಆ.ಅ./ಆ.ಸ(ಆಂ.ಪ), ಮೆಸ್ಕಾಂ.,